‘ಅಮ್ಮಾ, ಸಾಧ್ಯವಾದರೆ ಕ್ಷಮಿಸು. ನಮ್ಮ ಮನೆಯ ಕಾರಿನ ಡ್ರೈವರ್ ನನಗೆ ತುಂಬಾ ಇಷ್ಟವಾಗಿದ್ದಾನೆ. ನಾವಿಬ್ಬರೂ ಪ್ರೀತಿಸುತ್ತಿದ್ದೇವೆ. ಇದಕ್ಕೆ ನೀನು ಒಪ್ಪುವುದಿಲ್ಲವೆಂದು ನನಗೆ ಗೊತ್ತು. ನಾವಿಬ್ಬರೂ ಲೀವಿಂಗ್‌ನಲ್ಲಿ ಇರಲು ಬಯಸಿದ್ದೇವೆ. ನಮ್ಮ ಮದುವೆಗಾಗಿ ನೀನು ಖರ್ಚು ಮಾಡುವುದು ಬೇಡ...’

ಮಗಳು ತುಂಬಾ ಬೆಳೆದಿದ್ದಾಳೆ, ಅವಳ ಅಪ್ಪನಂತೆ!

★★★

ಒಂದು ವರ್ಷದ ಅವಧಿಯಲ್ಲಿ ಏನೆಲ್ಲಾ ನಡೆದುಹೋದವು! ಅಪ್ಪ, ಚಿಕ್ಕಮ್ಮ, ತಂಗಿಯಂದಿರು, ಚಿಕ್ಕಮ್ಮನ ಮಕ್ಕಳು, ರಂಜಿತ್, ರೇಖಾ, ರಮಣಿ, ಸ್ನೇಹಿತರು, ಸಂಬಂಧಿಗಳು, ವಿದ್ಯಾರ್ಥಿಗಳು, ಜೊತೆಯಲ್ಲಿ ಕೆಲಸ ಮಾಡುವವರು, ಮನೆ, ಕಾಲೇಜು, ಕೆಲಸ, ತರಕಾರಿ ಮಾರುವ ಸುನಯನ... ಯೋಚಿಸುತ್ತಿದ್ದಂತೆ ಮನಸ್ಸೆಲ್ಲಾ ಗೋಜಲು...

ಮುದ್ದಿನ ಮಗಳು ರೇಖಾ ಫೋನ್ ಮಾಡಿ ಒಮ್ಮೆ ಮಾತನಾಡಿದ್ದಳು, ‘ಮಮ್ಮೀ, ನನಗ್ಯಾಕೋ ಈತ ಸರಿಬರುತ್ತಿಲ್ಲ; ನನಗೆ ಸ್ವಾತಂತ್ರ್ಯವೇ ಇಲ್ಲ. ಆತನೊಬ್ಬನೇ ಕುಡಿಯಬಹುದಂತೆ, ನಾನು ಕುಡಿಯಬಾರದಂತೆ; ಆತ ಸಿಗರೇಟು ಸೇದಬಹುದಂತೆ, ನಾನು ಸೇದಬಾರದಂತೆ; ಆತ ಇತರ ಹುಡುಗಿಯರೊಂದಿಗೆ ಸಲುಗೆಯಿಂದ ಇರಬಹುದಂತೆ, ನಾನು ಇತರ ಹುಡುಗರೊಂದಿಗೆ ನಗಬಾರದಂತೆ, ಮಾತನಾಡಬಾರದಂತೆ... ಇದ್ಯಾವ ನ್ಯಾಯ ಮಮ್ಮೀ?’

ನಿನ್ನೆ ತರಕಾರಿ ಮಾರುಕಟ್ಟೆಗೆ ಹೋದಾಗ ಸುನಯನಳ ಕಣ್ಣುಗಳಲ್ಲಿ ಕಾಂತಿಯಿತ್ತು. ಏಕೆಂದರೆ ಆಕೆಯ ಪತಿಯ ಕಣ್ಣುಗಳಿಗೆ ಬೆಳಕು ಬಂದಿತ್ತು.

“ಅಕ್ಕಾ, ನೀವು ವಾರಗಟ್ಟಲೆ ಇತ್ತ ಬರಲೇ ಇಲ್ಲ. ನನ್ನವರ ಕಣ್ಣಿನ ಆಪರೇಷನ್ ಆಯ್ತು. ದೃಷ್ಟಿ ಬಂದಿದೆ. ನಾನು ಇನ್ನು ತರಕಾರಿ ಮಾರುವುದಕ್ಕೆ ಬರುವುದಿಲ್ಲ. ಮಗಳನ್ನು ನೋಡಿಕೊಳ್ಳಬೇಕು. ನನ್ನವರನ್ನು ನೋಡಿಕೊಳ್ಳಬೇಕು. ನನಗೆ ಮತ್ಯಾರೂ ಇಲ್ಲ; ಏಕೆಂದರೆ, ನಾನು ಓಡಿ ಬಂದವಳು.”

ಯಾಕೋ ಮನಸ್ಸೇ ಸರಿಯಿಲ್ಲ. ಹಣ, ಅಂತಸ್ತು, ಒಳ್ಳೆಯ ಉದ್ಯೋಗ, ಮನೆ ಎಲ್ಲವೂ ಇದೆ. ಆದರೆ ನೆಮ್ಮದಿ?

ತನ್ನ ಬದುಕನ್ನು ಸರಿಪಡಿಸಿಕೊಂಡ ಸುನಯನ ಓಡಿ ಬಂದವಳು. ಹಾಗಾದರೆ ನಾನು?

ಯಾರೋ ಮೆಲುವಾಗಿ ಕಿವಿಯಲ್ಲಿ ಹೇಳಿದಂತಾಗುತ್ತಿದೆ, ‘ನೀನೂ ಓಡಿ ಬಂದವಳು.’

## ನಾಗ ಎಚ್. ಹುಬ್ಳಿ

ಹುಬ್ಬಳ್ಳಿಯ ಈ ಲೇಖಕ ಜಾರ್ಖಂಡ್‌ನ ರಾಂಚಿ ಕಾಲೇಜಿನ ಪತ್ರಿಕೋದ್ಯಮ ವಿಭಾಗದ ಪ್ರಾಧ್ಯಾಪಕ. ಓದಿದ್ದು: ಎಲೆಕ್ಟ್ರಿಕಲ್ ಎಂಜಿನಿಯರಿಂಗ್‌ನಲ್ಲಿ ಡಿಪ್ಲೊಮಾ, ಪತ್ರಿಕೋದ್ಯಮದಲ್ಲಿ ಎಂ.ಎ. ಮತ್ತು ಕನ್ನಡದಲ್ಲಿ ಎಂ.ಎ.

ವಿವಿಧ ಪತ್ರಿಕೆ, ಟೀವಿ ವಾಹಿನಿಯಲ್ಲಿ ಪತ್ರಕರ್ತರಾಗಿ ಕೆಲಸ. ಆದಿವಾಸಿಗಳನ್ನು ಕುರಿತು ಕಳೆದ 14 ವರ್ಷಗಳಿಂದ ಜಾರ್ಖಂಡ್, ಬಿಹಾರ, ಒಡಿಶಾ, ಪಶ್ಚಿಮ ಬಂಗಾಳ, ಛತ್ತೀಸಗಢ, ನಿಕೋಬಾರ್ ದ್ವೀಪ, ಉತ್ತರಾಖಂಡ ಮುಂತಾದ ರಾಜ್ಯಗಳ ಆದಿವಾಸಿ ತಾಂಡಾಗಳಿಗೆ (ದಟ್ಟವಾದ ಕಾಡುಗಳೂ ಸೇರಿದಂತೆ) ನಿರಂತರ ಭೇಟಿ ನೀಡಿ ಜನಾಂಗೀಯ ಅಧ್ಯಯನ ನಡೆಸುತ್ತಿದ್ದಾರೆ. ‘ಕುವೆಂಪು ಭಾಷಾ ಭಾರತಿ ಪ್ರಾಧಿಕಾರ’ ಅವರ 'ಸರಹುಲ್' (ನಾಗಪುರಿ ಜನಪದ ಕಥೆಗಳು) ಪುಸ್ತಕವನ್ನು ಪ್ರಕಟಿಸಿದೆ; 'ಜಾರ್ಖಂಡ್ ಆದಿವಾಸಿ ಬದುಕು' ಎಂಬ ಪುಸ್ತಕ ಪ್ರಕಟಣೆಯ ಹಂತದಲ್ಲಿದೆ.